ರೂಮುಗಳಲ್ಲಿದ್ದವರು, ಅತ್ತೆಯರು, ಮಾವಂದಿರು, ಚಿಕ್ಕಪ್ಪಂದಿರು ಎಲ್ಲರೂ ಓಡೋಡಿ ಬಂದಿದ್ದರು. 'ಎಲ್ಲೇ... ಗೋಧಿ ಮೂಟೆ... ನನ್ನ ಹಸಿರು ಲಂಗ ಎಲ್ಲಿ?' ಹಲ್ಲು ಕಚ್ಚಿಕೊಂಡು ಕೂಗಿದಳು. 'ನಿನ್ನನ್ನೇ ಕೇಳ್ತಿರೋದು... ಎಲ್ಲಿ ಅಂತ?'

ತಂದೆಯ ಬಿರುನುಡಿಗೆ ಹೆದರಿ ಬಚ್ಚಲಿಗೆ ಓಡುತ್ತಿದ್ದವಳು, ಈಗ ತಂಗಿಯ ಕೂಗಾಟಕ್ಕೂ ಬಚ್ಚಲಿಗೆ ಓಡುವಂತಾಗಿತ್ತು. 'ಸುಮೀ... ಅದು... ಅಮ್ಮ... ಕಣೇ...' ತೊದಲಿದೆ.

'ನಂಗದೆಲ್ಲ ಬೇಡ. ನನ್ನ ಲಂಗ ಕೊಡ್ತೀಯೋ... ಇಲ್ಲ ಏನು ಮಾಡ್ತೀನಿ ನೋಡ್ತ ಇರು...' ರೋಷದಿಂದ ಅಲಮಾರಿನಲ್ಲಿದ್ದ ಬಟ್ಟೆಗಳನ್ನೆಲ್ಲ ಎಳೆದು ಹೊರಗೆ ಹಾಕಿ, ಅದನ್ನು ಕಾಲಿನಿಂದ ತುಳಿದು, ತುಳಿದು... 'ಕೊಡು ನನ್ನ ಲಂಗಾನ... ಇಲ್ಲ ಅಂದ್ರೆ ಎಲ್ಲದನ್ನೂ ಕತ್ತರಿಸಿ ಹಾಕಿ ಬಿಡ್ತೀನಿ...' ಮತ್ತೆ ಕೂಗಾಡಿದಳು.

ಅಮ್ಮ ಬಂದರು, 'ಮುಚ್ಚೇ ಬಾಯಿ ಸುಮಿ, ಅತೀ ಆಯ್ತು ನಿಂದು. ವಿಜಿ ಹಾಕ್ಕೊಂಡು ಹೋಯ್ತು. ವಸಂತಿ ಏನು ಮಾಡೋಕೆ ಆಗುತ್ತೆ? ಸುಮ್ನೆ ಜಗಳ ತೆಗೀಬೇಡ. ಹೋಗು, ಹಬ್ಬದ ದಿನ ರಂಪ ಮಾಡಬೇಡ. ಮುಖ ತೊಳಕೊಂಡು ಗುಲಾಬಿ ಲಂಗ ಇದೆ, ಅದನ್ನ ಹಾಕ್ಕೊ...' ಅಮ್ಮನ ಮಾತು ಮುಗಿಯುವ ವೇಳೆಗೆ ಮಾತಿನಲ್ಲಿ ಅನುನಯ.

'ಬೇಡ, ಬೇಡ, ಬೇಡ... ಏನೂ ಬೇಡ. ನನ್ನ ಲಂಗ ಅವಳು ಹೇಗೆ ಹಾಕ್ಕೊಂಡ್ಲು, ನೀವು ಹೇಗೆ ಅವಕಾಶ ಕೊಟ್ರಿ ಅದಕ್ಕೆ...'

'ಸರಿ, ಆಯ್ತು ತಾಯಿ. ತಪ್ಪಾಯ್ತೆ. ಅಪ್ಪ ಬಂದ ಕೂಡಲೇ ನಿನಗೆ ಹೊಸ ಲಂಗ ಕೊಡಿಸ್ತೀನಿ. ಈಗ ಸುಮ್ಮನಿರು ಮಾರಾಯ್ತಿ. ಹಬ್ಬದ ದಿನ ದೊಡ್ಡ ರಂಪ ಮಾಡ್ತೀಯ...' ಅಮ್ಮ ಸುಮ್ಮನಾಗಿಸಿದರು.

ಆದರೆ ಅವಳು ಸುಮ್ಮನಾಗಿದ್ದು, ಅಪ್ಪ ಕಾಲೇಜಿಂದ ಮನೆಗೆ ಬಂದ ಕೂಡಲೇ ಕುಳಿತು ಕೊಳ್ಳಲೂ ಬಿಡದೇ, ಅಂಗಡಿಗೆ ಹೋಗಿ ಹೊಸ ಲಂಗ ಬಟ್ಟೆ ತರಿಸಿ ಹೊಲಿಯಲು ಹಾಕಿದ ಮೇಲೆಯೇ.

ವಾಸಂತಿ ಮನದಲ್ಲೇ ನಕ್ಕು ಅಂದುಕೊಂಡಳು: 'ಹೌದು, ನಾನು ಹಾಗೆಯೇ ಬೆಳೆದುಬಿಟ್ಟೆ. ನನಗೇನು ಬೇಕು ಅಂತ ತಿಳಿಯಲೂ ಹೋಗದೆ ಬೇರೆಯವರಿಗೆ ಬೇಕಾದ್ದನ್ನ ಕೊಟ್ಟುಬಿಟ್ಟರೆ ಸಾಕು, ನನ್ನ ಬದುಕು ಸಾರ್ಥಕ ಅನ್ನುವಂತೆ. ಆದರೆ ನನ್ನ ಯಾವೊಂದು ತಪ್ಪೂ ಇಲ್ಲದೇ ತಪ್ಪಿತಸ್ಥಳಾಗೇ ನಿಲ್ಲುತ್ತಿದ್ದೆನಲ್ಲ ಯಾವಾಗಲೂ? ಯಾಕೆ?'

ನನಗೆ ಹದಿನೇಳು ತುಂಬುವ ವೇಳೆಗೆ ಹುಡುಗನನ್ನು ಹುಡುಕತೊಡಗಿದರು. ಎಲ್ಲರೂ ಗ್ರಾಜುಯೇಶನ್ ಅಂತ ಕೇಳುವಾಗ ಏಳನೇ ಇಯತ್ತೆಯ ನನ್ನನ್ನು ಯಾರು ತಾನೇ ಮದುವೆ ಆಗುತ್ತಾರೆ. ಆಗ ಬಂದಿದ್ದೇ ಸುಬ್ರಹ್ಮಣ್ಯ ಚತುರ್ವೇದಿ. ಅಪ್ಪನ ದೂರದ ಸಂಬಂಧಿ. ಶಿವಮೊಗ್ಗದ ಬಳಿಯ ಹಳ್ಳಿ. ತುಂಬಿದ ಮನೆ. ಊರ ತುಂಬಾ ತೋಟ, ಗದ್ದೆ. ಅರಮನೆಯಂತಹ ಮನೆ. ನನಗಿಂತ ಏನಿಲ್ಲವೆಂದರೂ ಎಂಟು ವರ್ಷ ಹಿರಿಯ. ಅವರೂ ಗ್ರಾಜುಯೇಟ್. ಆದರೂ ಹಳ್ಳಿ ಮನೆಯನ್ನು ತೋಟವನ್ನು ನೋಡಿಕೊಳ್ಳಲು, ನಡೆಸಲು ಒಬ್ಬ ಹೆಣ್ಣು ಬೇಕಿತ್ತು. ಐದು ತಮ್ಮಂದಿರು, ಮೂವರು ತಂಗಿಯರಿದ್ದ ಮನೆಯ ಹಿರಿಯ ಸೊಸೆಯಾಗಿ ನಾನು ಹೋಗಬೇಕಾಯಿತು. ಅಮ್ಮ ಮದುವೆ ಗೊತ್ತಾದಾಗಿನಿಂದ ಸಾವಿರ ಸಲವಾದರೂ ಹೇಳಿದ್ದಳು 'ವಾಸೀ, ನೀನೇ ಹೊಂದಿಕೋಬೇಕು ಕಣೆ. ನೀನೇ ಹಿರಿ ಸೊಸೆ. ಯಜಮಾನಿಕೆಯೂ ನಿನ್ನದೇ... ಆಳ್ತನವೂ ನಿನ್ನದೇ. ಸೈರಿಸಿಕೊ. ಒಂದಲ್ಲ ಹತ್ತು ಮಾತು ಬರುತ್ತೆ. ಎಲ್ಲ ಹೊಟ್ಟೆಯಲ್ಲಿ ಇಟ್ಟುಕೊ.'

ನನ್ನ ಮಾತುಗಳನ್ನು ಹೇಳಿಕೊಳ್ಳಲು ತನಗಾದರೂ ಯಾರಿದ್ದರು. ಎರಡು ಮೂರು ವರ್ಷ ಸತತವಾಗಿ ಹುಡುಕಿದ ನಂತರ ಸಿಕ್ಕ ಗಂಡು ಆತ. ತನ್ನ ಬಣ್ಣ, ರೂಪ ನೋಡಿ ಮರುಳಾದ ಅಂತೇನೂ